ಬುದ್ಧಿಪೂರ್ವೋತ್ತರಾಘಾನಾಮನುತ್ಪತ್ತಿಕ್ರಮಃ

ಇವೈಯೆಲ್ಲಾತ್ತುಕ್ಕುಮಡಿ ಫಲಪ್ರದಾನೋನ್ಮುಖ ಮಾಯಿರುಪ್ಪ

ವ್ಯಾಖ್ಯಾತೃವೂ ಮತ್ತು ಕಾರಿಕಾದರ್ಪಣ ವ್ಯಾಖ್ಯಾತೃವೂ ಸಹ **ನಿದಾನಸ್ಯ** - ಎಂಬುವದನ್ನು ಅವಿವೇಕ **ಪ್ರಭುತ್ವಾದೇಃ** ಈ ದೇಹಾತ್ಮ ಸ್ವತಂತ್ರಾತ್ಮ ಭ್ರಮವೇ ಮೊದಲಾದವುಗಳ, **ನಿದಾನಸ್ಯ** - ಮೂಲಕಾರಣಭೂತವಾದ ಪ್ರಾರಬ್ಧ ರೂಪ ಪೂರ್ವಾಘ ವಿಶೇಷವೆಂದು ಬರೆದಿರುತ್ತಾರೆ; ಈ ಪ್ರಾರಬ್ಧರೂಪ **ಪೂರ್ವಾಘದ, ನಿವರ್ತನಾತ್** - ಶರಣಾಗತಿಯ ಮೂಲಕ ನಿವೃತ್ತಿಯುಂಟಾಗುವದರಿಂದ, ಅರ್ಥಕಾಮಗಳಿಂದುಂಟಾಗುವ ಬುದ್ಧಿಪೂರ್ವೋತ್ತರಾಘವು ಉಂಟಾಗುವದಿಲ್ಲ ವೆಂದು ಅರ್ಥಮಾಡಿರುತ್ತಾರೆ. ಮೊದಲಿನ ಅರ್ಥವೇ ಹಿಂದೆಯುಪಪಾದಿಸುದಕ್ಕೆ ಅನುಗುಣವಾಗಿರುವದರಿಂದ, ಅದೇ **ಸಮಂಜಸವಾದ ಅರ್ಥ**ವೆಂದು ತೋರಿ ಬರುತ್ತದೆ. ಈ ಎರಡನೇ ಅರ್ಥದಲ್ಲಿ ಅಪರಾಧಗಳಿಗೆ **ಅವಿವೇಕ**ವು ಮೂಲ ಕಾರಣವೆಂದೂ, ಈ ಮೂಲಕಾರಣವಾದ **ಅವಿವೇಕ**ಕ್ಕೆ ಬುದ್ಧಿಪೂರ್ವೋತ್ತರಾಘವು ಮೂಲಕಾರಣವೆಂದೂ, ಹೇಳಿದರೆ ಮೂಲಕಾರಣಕ್ಕೆ ಮೂಲಕಾರಣವೊಂದುಂಟು ಎಂದು ಹೇಳುವದರ ಮೂಲಕ **ಅಸಮಂಜಸ**ವು. ಈ ಅರ್ಥವನ್ನೂ ಕಷ್ಟಪಟ್ಟು ಒಂದು ವಿಧವಾಗಿ ಸಮನ್ವಯವನ್ನು ಮಾಡಬಹುದು ಹೇಗೆಂದರೆ :—ಹಿಂದಿನ ಅಪರಾಧಗಳೇ ಈ ಅವಿವೇಕಗಳಿಗೆಲ್ಲಾ ಮೂಲಕಾರಣವು, ಈ ಅವಿವೇಕಗಳಿಗೆ ಮೂಲಕಾರಣವು, **ಪ್ರಾರಬ್ಧಕರ್ಮವೂ** ಎಂದು ಹೇಳುವದರಿಂದ ಅಪರಾಧಗಳಿಂದ ಅವಿವೇಕವೂ, ಅವಿವೇಕದಿಂದ ಅಪರಾಧಗಳೂ ಹೀಗೆ ಬೀಜಾಙ್ಕುರನ್ಯಾಯದ ಪ್ರಕಾರ ಉಂಟಾಗುತ್ತವೆಂದು ಹೇಳಬಹುದು. ಆದರೂ ಹಿಂದೆ ಉಪಪಾದಿಸಿದುದನ್ನೇ ಕಾರಿಕೆ ಮೂಲಕ ಸಮರ್ಥನೆಮಾಡುವ ಪದ್ಧತಿಯಿರುವದರಿಂದ ಮೊದಲಿನ ಅರ್ಥವೇ ಸಮಂಜಸವಾಗಿ ತೋರುತ್ತದೆ.

ಬುದ್ಧಿಪೂರ್ವೋತ್ತರಾಘಗಳು ಉಂಟಾಗದೇ ಇರುವ ಕ್ರಮವು

ಹಿಂದೆ ಉಪಪಾದಿಸಿದರಲ್ಲೂ ಕಾರಿಕಾ ಮೂಲಕ ಸಮರ್ಥನೆಯಲ್ಲೂ ಆತ್ಮ ಸ್ವರೂಪ ಯಥಾರ್ಥಜ್ಞಾನದಿಂದುಂಟಾದ ವಿವೇಕದಿಂದ ಅವಿವೇಕರೂಪವಾದ ದೇಹಾತ್ಮಸ್ವತಂತ್ರಾತ್ಮ ಜೀವಪರಮಾತ್ಮೈಕ್ಯ ಭ್ರಮಗಳು ತೊಲಗುವದರಿಂದ ಬುದ್ಧಿಪೂರ್ವೋತ್ತರಾಘರೂಪವಾದ ದ್ರವ್ಯಕಾಮಾಭಿಲಾಷೆಗಳಿಂದ ಪ್ರಾಪ್ತವಾಗುವ ಬುದ್ಧಿಪೂರ್ವೋತ್ತರಾಘಗಳು ನಶಿಸಿಹೋಗುತ್ತವೆ ಎಂದು ಹೇಳಲ್ಪಟ್ಟಿತು. ಆದರೆ

ಹ್ಯನು. (೧) **ಕಲೌ ಜಗತ್ಪತಿಂ ವಿಷ್ಣುಂ ಸರ್ವಸ್ರಷ್ಟಾರ ಮೀಶ್ವರಂ।**
ನಾರ್ಚ ಯಿಷ್ಯಂತಿ ಮೈತ್ರೇಯ ಪಾಷಂಡೋ ಪಹತಾ ಜನಾಃ"
ಎನ್ನುಚ್ಚೆಯ್ದೆ ೨ "**ಕಲೌ ಖಲುಭನಿಷ್ಯಂತಿ ನಾರಾಯಣ ಪರಾ**
ಯಣಾಃ । ಕ್ವಚಿತ್ಕ್ವಚಿನ್ಮಹಾ ಭಾಗಾ (ದ್ರಾ) ದ್ರಮಿಡೇಷುಚ
ಭೂರಿಶಃ। ತಾಮ್ರಪರ್ಣೀ ನದೀಯತ್ರ ಕೃತವಾಲಾ ಪಯಸ್ವಿನೀ।

ಜಗತ್ಪಾಲಕನಾದ, ವಿಷ್ಣುವನ್ನು **ನಾರ್ಚಯಿಷ್ಯಂತಿ** ಪೂಜಿಸುವುದಿಲ್ಲವು." **ಎನ್ನುಚ್ಚೆಯ್ದೇ**-ಎಂದು ಹೇಳಲ್ಪಟ್ಟಿದ್ದರೂ ಕೂಡ, **ಕಲೌ**-ಕಲಿಯುಗದಲ್ಲೂ ಕೂಡ, **ನಾರಾಯಣ ಪರಾಯಣಾಃ**-ನಾರಾಯಣನಲ್ಲಿ ಆಸಕ್ತವಾದ ಮನಸ್ಸುಳ್ಳವರು, ಸುಕೃತ ವಿಶೇಷದಿಂದಲೂ, ಕಲಿಯುಗದಲ್ಲಿ ಸರ್ವೇಶ್ವರನನ್ನು ಹೊಂದುವ ಉಪಾಯಾನುಷ್ಠಾನವು ತುಂಬಾ ಸುಕರವಾದುದರಿಂದಲೂ, **ಭವಿಷ್ಯಂತಿ**-ಜನಿಸುವರು ಅಥವಾ ಆಗುವರು. ಮಹಾಭಾಗಾಃ-ನಾರಾಯಣ ಪರಾಯಣರಾದ ಅಂತಹ ಸುಕೃತ ಶಾಲಿಗಳಾದ ಮಹಾ ಭಾಗವತರುಗಳು ವಿಕ್ಕ ದೇಶಗಳಲ್ಲಿ **ಕ್ವಚಿತ್ಕ್ವಚಿತ್**-ಎಲ್ಲೋ ಒಂದೊಂದು ಕಡೆಯಲ್ಲಿ ಜನಿಸುವರು. **ದ್ರಮಿಡೇಷು**-ದ್ರಮಿಡ ದೇಶಗಳಲ್ಲಿ ಯಾದರೋ, **ಭೂರಿಶಃ**-ಬಹಳವಾಗಿ ಜನಿಸುವರು. ಆ ದ್ರಮಿಡ ದೇಶಗಳಲ್ಲೂ ಎಲ್ಲಿ ಜನಿಸುವರು ಎಂದರೆ ಹೇಳುತ್ತಾರೆ. **ಯತ್ರ** - ಯಾವಸ್ಥಳದಲ್ಲಿ, ತಾಮ್ರಪರ್ಣೀನದಿಯು ಪ್ರವಹಿಸುತ್ತದೋ, ಅಲ್ಲಿ ಜನಿಸುವರು; ಹೀಗೆ ಹೇಳಿದುದರಿಂದ, ಆಳ್ವಾರರುಗಳಲ್ಲಿ ಶ್ರೇಷ್ಠರಾದ ನಮ್ಮಾಳ್ವಾರವರ ಅವತಾರಸ್ಥಳವು ಬೋಧಿಸಲ್ಪಟ್ಟಿತು. **ಯತ್ರಕೃತವಾಲಾ**-ಎಲ್ಲಿ ವೈಗೆ ಎಂಬ ನದಿಯು ಪ್ರವಹಿಸುತ್ತದೋ ಅಲ್ಲಿಯೂ ಅವತರಿಸುವರು; **ಈ** ನದಿಯ ದಡದಲ್ಲಿರುವ **ಶ್ರೀವಿಲ್ಲಿಪುತ್ತೂರೆಂಬ** ಸ್ಥಳದಲ್ಲಿ ಪೆರಿಯಾಳ್ವಾರವರು ಅವತರಿಸಿದರು; **ಯತ್ರಪಯಸ್ವಿನೀ** ಎಲ್ಲಿ ಪಾಲಾರು ನದಿಯು ಪ್ರವಹಿಸುತ್ತದೋ ಅಲ್ಲಿಯೂ ಅವತರಿಸುವರು; ಇದರ ದಡದಲ್ಲಿ ತಿರುಮಳಿಶೈಯ್ಯಾಳ್ವಾರವರೇ ಮೊದಲಾದವರು ಜನಿಸಿದರು; **ಯತ್ರ ಮಹಾಭಾಗಾ ಕಾವೇರೀ**-ಎಲ್ಲಿ ಮಹಾ ಪುಣ್ಯ ನದಿಯಾದ ಕಾವೇರಿಯು ಪ್ರವಹಿಸುತ್ತದೋ ಅಲ್ಲಿಯೂ ಮಹಾ ಭಾಗವತರು ಉಂಟು; ಇದರ ದಡದಲ್ಲಿ, ತೊಂಡರಡಿಪ್ಪೊಡಿಯಾಳ್ವಾರ್ ತಿರುಪ್ಪಾಣಾಳ್ವಾರ್ ಮೊದಲಾದವರು ಶ್ರೀರಂಗದಲ್ಲಿ ಅವತರಿಸಿದರು; **ಯತ್ರಪ್ರತೀಚೀಚ ಮಹಾನದೀ**-ಎಲ್ಲಿ ಪ್ರಸಿದ್ಧವಾದ ಪ್ರತ್ಯಜ್ಮುಖೀ ನದಿಯು ಪ್ರವಹಿಸುತ್ತದೆಯೋ ಅಲ್ಲಿಯೂ ಮಹಾಭಾಗವತೋತ್ತಮರಿರುವರು; ಇದರ ದಡದಲ್ಲಿ ಶ್ರೀ ಕುಲಾಶೇಖರಾಳ್ವಾರವರು ಅವತರಿಸಿದರು; **ಹೇ ಮನುಜೇಶ್ವರ**-ಓ ರಾಜನೇ, **ಯೇ ಮನುಜಾಃ** - ಯಾವ ಮನುಷ್ಯರು, **ತಾಸಾಂ**-ಮೇಲೆ

---

(೧) ವಿ. ಪ್ರ. ೬. ೧. ೫೦ (೨) ಶ್ರೀಭಾಗ. ೧೧. ೫. ೩೮-೯

ಕಾವೇರೀ ಚ ಮಹಾಭಾಗಾ ಪ್ರತೀಚೀ ಚ ಮಹಾನದೀ । ಯೇ ಪಿಬನ್ತಿ ಜಲಂ ತಾಸಾಂ ಮನುಜಾ ಮನುಜೇಶ್ವರ । ಪ್ರಾಯೋ ಭಕ್ತಾ ಭಗವತಿ ವಾಸುದೇವೇzಮಲಾಶಯಾಃ ॥" ಇತ್ಯಾದಿಗಳಿಲೇ ಕಲಿಯುಗತ್ತಿಲ್ ಭಾಗವತರ್‌ಗಳ್ ವಸಿಕ್ಕುಮ್ ದೇಶವಿಶೇಷಮುಮ್ ಶೊಲ್ಲುಗೈಯಾಲೆ, ಇನ್ದ ಯುಗತ್ತಿಲ್ ಇಪ್ಪ್ರದೇಶಙ್ಗಳಿಲ್ ಭಾಗವತ ಪರಿಗೃಹೀತಮಾನ ಸ್ಥಲ ಙ್ಗಳೇ ಪರಿಗ್ರಾಹ್ಯಙ್ಗಳ್. ತಿರುನಾರಾಯಣೀಯತ್ತಿಲ್ (೧) ವಿಕೆಪಾದ

ಹೇಳಿದ ಆ ನದಿಗಳ, **ಜಲಂ** - ನೀರನ್ನು, **ಪಿಬಂತಿ** - ಕುಡಿಯುತ್ತಾರೋ, **ಅವರು** ಗಳು, **ವಾಸುದೇವೇ ಭಗವತಿ** - ವಾಸುದೇವನಾದ ಭಗವಂತನಲ್ಲಿ, **ಪ್ರಾಯಃ**- ಸಾಮಾನ್ಯವಾಗಿ, **ಭಕ್ತಾಃ** - ಭಕ್ತರಾಗುತ್ತಾರೆ, **ಅಮಲಾಶಯಾಃ** - ನಿರ್ಮಲ ಚಿತ್ತರಾದವರಾಗಿ ಆಗುವರು. ಪಾಪದಲ್ಲಿ ಪ್ರವರ್ತಿಸದ ಮನಸ್ಸುಳ್ಳವರಾಗುವ ರೆಂಬ ಭಾವವು." ಇತ್ಯಾದಿಗಳಿಲೇ - ಎಂಬಿವೇ ಮೊದಲಾದ **ಪ್ರಮಾಣ**ಗಳಲ್ಲಿ, ಕಲಿಯುಗದಲ್ಲಿ ಭಾಗವತರುಗಳು, **ವಸಿಕ್ಕುಮ್** - ವಾಸ ಮಾಡುವ, ದೇಶವಿಶೇಷ ವನ್ನು, **ಶೊಲ್ಲುಗೈಯಾಲೇ** - ಹೇಳುವದರಿಂದ, **ಇನ್ದ ಯುಗತ್ತಿಲ್** - ಈ ಕಲಿಯುಗದಲ್ಲಿ, **ಇಪ್ಪ್ರದೇಶಙ್ಗಳಿಲ್** - ಚಾತುರ್ವರ್ಣ್ಯ ಧರ್ಮ ಪ್ರತಿಷ್ಠಿತವಾದ **ಈ** ದ್ರಮಿಡ ಪ್ರದೇಶಗಳಲ್ಲಿ, **ಭಾಗವತ ಪರಿಗೃಹೀತಮಾನ** - ಭಾಗವತರುಗಳಿಂದ ಸ್ವೀಕರಿಸಲ್ಪಟ್ಟ ಎಂದರೆ ಅವರುಗಳಿಗೆ ಅಭಿಮತವಾದ, ಸ್ಥಳಗಳೇ, **ಪರಿಗ್ರಾಹ್ಯ ಙ್ಗಳ್** - ಪ್ರಪನ್ನನಿಗೆ ಉಪಾದೇಯವಾದವುಗಳು, ಅತನು **ಅಭಿಮಾನಿಸತಕ್ಕವು** ಎಂಬ ಭಾವವು. ಹೀಗೆ ಹೇಳಿದುದರಿಂದ ಭಗವದಭಿಮತ ಸ್ಥಳಕ್ಕಿಂತ ಭಾಗವತಾಭಿ ಮತಸ್ಥಳವು ಉತ್ಕೃಷ್ಟವೆಂಬ ಭಾವವು. ಭಗವದ್ಭಾಗವತಾಭಿಮತಸ್ಥಳವಾದರೆ ಪರ ಮೋತ್ಕೃಷ್ಟವೆಂಬುವದೂ ತೋರಿಬರುತ್ತದೆ **"ಯತ್ರಯತ್ರಹಿನೀತಿಸ್ಸ್ಯಾದ್ವೈ ಷ್ಣವೀ ಶಿಷ್ಟಸಂಮತಾ । ತತ್ರತತ್ರ ವಸೇನ್ನಿತ್ಯಂ ನಾನ್ಯತ್ರೇತಿ ಮತಿರ್ಮಮ"** "ಪರಮಭಾಗವತರುಗಳಿಗಿಷ್ಟವಾದ ವೈಷ್ಣವನಿಷ್ಠೆಯು ಎಲ್ಲೆಲ್ಲಿರುತ್ತದೋ, ಅಲ್ಲಲ್ಲೆ ಲ್ಲಾ ಸದಾ ವಾಸಮಾಡತಕ್ಕದ್ದು. ಇನ್ನೆಲ್ಲೂ ಕೂಡದು, ಎಂಬುವದು ನನ್ನ ಅಭಿ ಪ್ರಾಯವು" ಎಂಬೀ ಪ್ರಮಾಣದ ತಾತ್ಪರ್ಯವು ಶ್ರೀ ಪರಾಶರ ವಾಕ್ಯದಲ್ಲಿ ಮಹಾ ಭಾಗವತರುಗಳಿರುವ ಸ್ಥಳವೇ ಇಲ್ಲವೆಂಬಭಿಪ್ರಾಯ ಉಂಟಾಗಬಹುದು. ಅವರಭಿ ಪ್ರಾಯವೇನೆಂದರೆ ಪಾಷಂಡೋಪಹತಜನವೇ ಹೆಚ್ಚಿಂದೂ, ಅವರುಗಳು ವಿಷ್ಣುವ ನ್ನಾರಾಧಿಸುವದಿಲ್ಲವೆಂದೂ ಹೇಳಿದರು. ಈ ಅಭಿಪ್ರಾಯವನ್ನೇ ಅವರ ಪೌತ್ರ ರಾದ ಶುಕಮಹರ್ಷಿಯು **"ಕ್ವಚಿತ್ಕ್ವಚಿನ್ಮಹಾಭಾಗಾಃ"** ಎಂದು ವ್ಯಾಖ್ಯಾನ

---

(೧) ಭಾರ. ಶಾಂತಿ. ೩೪೯. ೮೫.